# ಆಧುನಿಕ ಕನ್ನಡ ಕವಿತೆಗಳಲ್ಲಿ ಹೆಣ್ಣು: ಒಂದು ಅವಲೋಕನ

**ವಾಣಿ ಬಿ.ಎನ್.***

**DOI: https://doi.org/10.5281/zenodo.21189339**

**ABSTRACT**

ಈ ಲೇಖನವು ಕನ್ನಡ ಸಾಹಿತ್ಯದ ನವೋದಯ ಕಾಲಘಟ್ಟದಲ್ಲಿ ಕವಿತೆಗಳ ಮೂಲಕ ಹೆಣ್ಣನ್ನು ಚಿತ್ರಿಸಿದ ಬಗೆಯನ್ನು ವಿಮರ್ಶಿಸುತ್ತದೆ. ಆಧುನಿಕ ಕವಿಗಳು ಮಹಿಳೆಯನ್ನು ತಾಯಿ, ಹೆಂಡತಿ, ಸತಿ ಮತ್ತು ಪ್ರೇಯಸಿಯಂತಹ ಕೌಟುಂಬಿಕ ಪಾತ್ರಗಳಲ್ಲಿ ತ್ಯಾಗ, ಸಹನೆ ಮತ್ತು ಪವಿತ್ರತೆಯ ಸಂಕೇತವಾಗಿ ವೈಭವೀಕರಿಸಿದರೆ, ಪುರುಷ ಕೇಂದ್ರಿತ ಸಮಾಜದ ನಿರೀಕ್ಷೆಗಳಿಗೆ ಅನುಗುಣವಾಗಿ ಆಕೆಯ ಅಸ್ತಿತ್ವವನ್ನು ಕಟ್ಟಿಕೊಟ್ಟಿದ್ದಾರೆ. ಲೇಖನವು ಕುವೆಂಪು, ಬೇಂದ್ರೆ, ಮಾಸ್ತಿ, ಸಾಲಿ ರಾಮಚಂದ್ರರಾಯರು ಸೇರಿದಂತೆ ಹಲವು ಕವಿಗಳ ಕವಿತೆಗಳನ್ನು ವಿಶ್ಲೇಷಿಸುತ್ತಾ, ಪುರುಷ ಪ್ರಧಾನ ದೃಷ್ಟಿಕೋನದಿಂದ ಹೊರಬಂದು ಮಹಿಳೆಯ ಸ್ವಂತಿಕೆ ಮತ್ತು ಸಂವೇದನೆಗಳನ್ನು ಅಭಿವ್ಯಕ್ತಿಸುವಲ್ಲಿನ ಮಿತಿಗಳನ್ನು ಎತ್ತಿ ತೋರಿಸುತ್ತದೆ. ಅದೇ ಸಮಯದಲ್ಲಿ ಮಹಿಳಾ ಕವಯತ್ರಿಯರು ತಮ್ಮ ಕವಿತೆಗಳ ಮೂಲಕ ಸ್ತ್ರೀ ಬದುಕಿನ ನೋವು, ಸಂಪ್ರದಾಯದ ಕಟ್ಟುಪಾಡುಗಳು ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧ ಧ್ವನಿ ಎತ್ತಿರುವುದನ್ನು ಲೇಖನ ದಾಖಲಿಸಿದೆ.

**KEYWORDS:** ನವೋದಯ ಕಾವ್ಯ, ಸ್ತ್ರೀ ಸಂವೇದನೆ, ಪುರುಷ ಕೇಂದ್ರಿತ ದೃಷ್ಟಿಕೋನ, ಕೌಟುಂಬಿಕ ಪಾತ್ರಗಳು, ಸ್ತ್ರೀ ಅಸ್ತಿತ್ವ.

* **ವಾಣಿ ಬಿ.ಎನ್.,** ಸಂಶೋಧನಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಹೆಣ್ಣಿಲ್ಲದ ಜಗತ್ತನ್ನು ಹೇಗೆ ಊಹಿಸಿಕೊಳ್ಳಲು ಸಾಧ್ಯವಿಲ್ಲವೋ ಹಾಗೆಯೇ ಹೆಣ್ಣಿನ ಇರುವಿಕೆಯಿಲ್ಲದ ಸಾಹಿತ್ಯ ಪರಂಪರೆಯನ್ನು ಗುರುತಿಸಲು ಸಾಧ್ಯವಿಲ್ಲ. ಇಲ್ಲಿ ಮುಖ್ಯವಾಗಿ ಮಹಿಳೆ ಸಾಹಿತ್ಯದ ಕರ್ತೃವಾಗಿ ಮತ್ತು ಸಾಹಿತ್ಯದ ವಸ್ತುವಾಗಿ ಮಹಿಳೆಯ ಸಂಬಂಧ. ಈ ಎರಡು ರೀತಿಯಲ್ಲಿ ಮಹಿಳೆ ಸಾಹಿತ್ಯದೊಂದಿಗೆ ಗುರುತಿಸಿಕೊಂಡಿದ್ದಾಳೆ. ಸಾಹಿತ್ಯದ ವಸ್ತುವಾಗಿ ಮಹಿಳೆ ಬಳಕೆಗೊಂಡಷ್ಟು ಸಾಹಿತ್ಯ ರಚನೆಯಲ್ಲಿ ಮಹಿಳೆಯ ಪಾತ್ರ ನಗಣ್ಯವಾಗಿದೆ. ಆದರೂ ಕರ್ತೃವಾಗಿ ಕನ್ನಡ ಸಾಹಿತ್ಯದಲ್ಲಿ ಮಹಿಳೆಯನ್ನು ನೋಡುವುದಾದರೆ ಹೆಚ್ಚಿನ ಮಟ್ಟದಲ್ಲಿ ಅಲ್ಲದಿದ್ದರೂ ಮೊದಲಿಗೆ ರನ್ನ ತಿಳಿಸಿರುವಂತೆ ಅತ್ತಿಮಬ್ಬೆ ಸಾಹಿತ್ಯ ಪೋಷಕಳಾಗಿ ನಂತರ ಕಂತಿ, ವಿಜ್ಜಿಕೆಯ ಸಾಹಿತ್ಯಿಕ ಬರವಣಿಗೆಯ ಬಗೆಗೆ ಕೆಲವಂಶಗಳು ದೊರೆಯುತ್ತವೆ. ನಂತರ ವಚನ ಸಾಹಿತ್ಯದ ಸಂದರ್ಭದಲ್ಲಿ ಅಕ್ಕಮಹಾದೇವಿಯನ್ನು ಒಳಗೊಂಡಂತೆ ಕೆಲವು ವಚನಗಾರ್ತಿಯರು ವಚನಗಳ ರಚನೆಯಲ್ಲಿ ಕಂಡುಬರುವರು ಹಾಗೂ ಸಂಚಿಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮ ಹೀಗೆ ಮಹಿಳಾ ಸಾಹಿತ್ಯ ಸೃಷ್ಟಿ ಮುಂದುವರೆಯುತ್ತದೆ. ಆಧುನಿಕ ಸಾಹಿತ್ಯದಲ್ಲಿಯೂ ನವೋದಯ ಕಾಲಘಟ್ಟವನ್ನು ಆದರಿಸಿ ಮಹಿಳೆ ಸಾಹಿತ್ಯದ ವಸ್ತುವಾಗಿ ಹೇಗೆ ಬಳಕೆಗೊಂಡಿದ್ದಾಳೆ ಎಂಬುದನ್ನು ಅರಿಯುವುದೇ ಪ್ರಸ್ತುತ ಲೇಖನದ ಆಶಯವಾಗಿದೆ. ಪ್ರಾಚೀನ ಸಾಹಿತ್ಯದಲ್ಲಿ ದೇವತೆಯಾಗಿ, ಪುರುಷ ಸಮಾಜಕ್ಕೆ ಮಾದರಿಯಾಗುವಂತೆ ಸೀತೆ, ಮಂಡೋದರಿ ಮೊದಲಾದ ಪಾತ್ರಗಳಲ್ಲಿ ಗುರುತಿಸಿಕೊಂಡಿದ್ದಾಳೆ. ಆಧುನಿಕ ಕವಿಗಳು ಸಹ ಹೆಣ್ಣನ್ನು ತಾಯಿ, ಹೆಂಡತಿ, ಸಹೋದರಿ ಹೀಗೆ ಕೌಟುಂಬಿಕ ಹಿನ್ನೆಲೆಯಲ್ಲಿ ವಸ್ತುವಾಗಿಸುವುದರೊಂದಿಗೆ ಸಾಮಾಜಿಕ ಪಾತ್ರಗಳಾದ ವೇಶ್ಯೆ, ದಲಿತೆ, ಭಿಕ್ಷುಕಿ, ಅನಾಥೆ ಇತ್ಯಾದಿ ಪಾತ್ರಗಳ ಮೂಲಕ ಹೆಣ್ಣನ್ನು ಕಟ್ಟಿಕೊಡಲಾಗಿದೆ.

ಆಧುನಿಕ ಕನ್ನಡದ ನವೋದಯ ಕಾಲದಲ್ಲಿ ಹೆಣ್ಣನ್ನು ಆದರ್ಶ, ತ್ಯಾಗ, ಮಮತೆ, ಪವಿತ್ರತೆಯ ಹಿನ್ನೆಲೆಯಲ್ಲಿ ಪ್ರತಿಬಿಂಬಿಸಲಾಗಿದೆ. ಭೂಮಿತಾಯಿಗೆ ಸಮನಾದ ತಾಳ್ಮೆ, ಸಹನೆ ಅವಳ ಗುಣಗಳಾಗಿರಬೇಕು ಎಂಬಂತೆ ವೈಭವೀಕರಿಸಲಾಗಿದೆ. ಇದೆಲ್ಲವೂ ಹೆಣ್ಣನ್ನು ವೈಯಕ್ತಿಕ ದೃಷ್ಟಿಕೋನದಲ್ಲಿ ಅಲ್ಲದೆ ಪುರುಷನ ಸಮಾಜದ ದೃಷ್ಟಿಕೋನದಲ್ಲಿ ಮಹಿಳೆ ಹೇಗಿರಬೇಕೆಂದು ಆಲೋಚನೆಗಳಿವೆಯೋ ಹಾಗೆಯೇ ಬಿಂಬಿಸಲಾಗಿದೆ. ಕುವೆಂಪು ಅವರು ಮನೆಮನೆಯ ತಪಸ್ವಿನಿ ಕವಿತೆಯಲ್ಲಿ ಗೃಹಿಣಿಯನ್ನು ವೈಭವೀಕರಿಸಿ ನಮಸ್ಕರಿಸುತ್ತಾ

**ಹೊಸಿಲಾಚೆಗೆ ನೀನೋತರೆ**<br>
**ಹೊಸಿಲೀಚೆಗೆ ಬೆಳಕಿಲ್ಲ**<br>
**ಹೆಸರಾಸೆಗೆ ನೀ ಸೋತರೆ**<br>
**ಉಸಿರಾಸೆಯೆ ನಮಗಿಲ್ಲ**

ಎಂದಿರುವುದು ಸ್ತ್ರೀಯನ್ನು ಮನೆಯೊಳಗಿನ ಕಾರ್ಯಕ್ಷೇತ್ರವನ್ನು ಮಾತ್ರ ನಿಭಾಯಿಸುವಂತೆ ಸೂಚಿಸಲಾಗಿದೆ. ಹೆಣ್ಣು ತನ್ನ ಗೌರವ, ಅಂತಸ್ತು, ಸ್ಥಾನ, ಅಧಿಕಾರ ಮೊದಲಾದವುಗಳಿಗೆ ಆಸೆ ಪಡಬಾರದು ಎಂಬ ಅಭಿಪ್ರಾಯವು ಅವರಲ್ಲಿರುವುದನ್ನು

ಗಮನಿಸಬಹುದು.

**ನಿಲ್ಲು ಕಣ್ಣೊರೆಸಿಕೊಳು, ನಿಲ್ಲು ತಾಯ್ ಹೋಗುವೆವು:**
**ತಾಯ್ವರಾ, ತಂದೆಯಿರ ಕೋಳ್ಳಿರಿವಳ**
**ಎರಡು ಮನೆಗಳ ಹೆಸರು ಖ್ಯಾತಿ ಉಳಿವಂತೆ**
**ತುಂಬಿದಾಯುಷ್ಯದಲಿ ಬಾಳಿ ಬದುಕು**

ವಿ. ಸೀತಾರಾಮಯ್ಯ ಅವರ ಮನೆ ತುಂಬಿಸುವುದು ಕವಿತೆಯಲ್ಲಿ ತವರು ಮನೆಯಿಂದ ಗಂಡನ ಮನೆಗೆ ಕಳಿಸುತ್ತಿರುವ ಮಗಳಿಗೆ ಗಂಡನ ಮನೆಯಲ್ಲಿ ಹೇಗೆ ಇರಬೇಕೆಂದು ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ಗಂಡನ ಮನೆಗೆ ಮತ್ತು ತವರಿನ ಮನೆಗೆ ಅಪಕೀರ್ತಿ ತರದೆ ಎರಡು ಮನೆಗಳ ಹೆಸರನ್ನು ಉಳಿಸಬೇಕೆಂದು ಆಶಿಸಿ ಮಗಳಿಗೆ ಬುದ್ಧಿವಾದ ಹೇಳುವುದು ನಮ್ಮ ಸಂಪ್ರದಾಯದಲ್ಲಿ ಪ್ರತಿಯೊಬ್ಬ ತಂದೆ ತಾಯಿಯ ಜವಾಬ್ದಾರಿ ಎಂಬಂತೆ ಬಿಂಬಿತವಾಗಿದೆ.

**ಆಡದಿರು ಮನದನ್ನೆ**
**ಎನಗೆ ಇದಿರಾಡದಿರು**
**ವಾದಕ್ಕೆ ಬೇಸತ್ತು**
**ಮರ್ಮಘಾತಕ್ಕೆ ಸತ್ತು**
**ಉಳಿದುಬಂದೆ:**
**ಎಲ್ಲಿಹುದು ತಿಳುವಳಿಕೆ**
**ಜೀವನದ ಸಲುವಳಿಕೆ**
**ಎಂದು ತಳಮಳಿಸಿ ನೀರಡಿಸಿ ಬಂದೆ**

ಎಂಬ ಬೇಂದ್ರೆ ಅವರ ಮನದನ್ನೆ ಕವಿತೆಯಲ್ಲಿ ಹೆಂಡತಿಯಾದವಳು ಗಂಡನ ಯಾವ ವಿಚಾರವನ್ನು ಪ್ರಶ್ನಿಸದೆ ಅವರ ಎಲ್ಲಾ ನಡೆಯನ್ನು ಒಪ್ಪಿ ಸುಮ್ಮನೆ ನಡೆಯಬೇಕು ಎಂಬ ಬಯಕೆ ಕವಿತೆಯಲ್ಲಿ ವ್ಯಕ್ತವಾಗಿದೆ. ಗಂಡನಿಗೆ ಯಾವುದೇ ವಾದ, ಪ್ರತಿವಾದ ಮಾಡದೆ ನನ್ನದು ನಿನ್ನದು ಎನ್ನದೆ ಅವರ ಹೃದಯಾಂತರಾಳವನ್ನು ಅರಿತು ನಡೆಯಬೇಕೆ ಹೊರತು ಗಂಡ ಹೆಂಡತಿ ಅಂತರಾಳವನ್ನು ಅರಿಯುವ ಪ್ರಯತ್ನವಿಲ್ಲದಿರುವುದು ಮಾತ್ರ ಸೋಜಿಗವಾಗಿದೆ.

**ಸ್ತ್ರೀ! ನೀನು ಪುರುಷನುಗ್ರತೆಯನಳಿಪ ಶಕ್ತಿ!**
**ನೀನಧಿಷ್ಠಾತ್ರಿಯಹೆ ಶಾಂತಿ ಸಾಮ್ರಾಜ್ಯಕೆ!**
**ನೀನಿರುವೆಯೌ ಪ್ರೇಮಸುಧೆಯನುಣಿಸುವ ತಾಯಿ!**

ಸಾಲಿ ರಾಮಚಂದ್ರರಾಯರ 'ಸ್ತ್ರೀ ಶಕ್ತಿ' ಕವಿತೆಯು ಸ್ತ್ರೀ ಹೇಗಿರಬೇಕೆಂದರೆ ಪುರುಷನ ಕೋಪವನ್ನು ತಣಿಸುವಂತವಳು, ಮನೆಯಲ್ಲಿ ಶಾಂತಿಯನ್ನು ನೆಲೆಸುವಂತಹ ಶಾಂತಿಸ್ವರೂಪಿ, ಪ್ರೇಮಸುಧೆಯಿಂದ ಪುರುಷನಿಗೆ ಉಣಬಡಿಸುವಂತಹ ದೇವತೆಯ ಸ್ವರೂಪಿಯಾಗಿರಬೇಕೆ ಹೊರತು ಸ್ತ್ರೀ ಎಂದೂ ತನ್ನ ಸ್ವತಂತ್ರ ಅಸ್ತಿತ್ವವನ್ನು

ಹೊಂದಬೇಕೆಂಬ ಅಭಿಲಾಷೆಯಾಗಲಿ, ತನ್ನಿಚ್ಛೆಯಂತೆ ನಡೆಯಬೇಕೆಂಬ ಮನೋಧರ್ಮ ಪುರುಷನಿಗಿಲ್ಲದೆ ಸದಾ ಪುರುಷನಿಗೆ ಹಿತಕರವಾಗಿ ನಡೆದುಕೊಳ್ಳುವುದೇ ಸ್ತ್ರೀಗೆ ಮುಖ್ಯವಾಗಬೇಕು ಎಂಬಂತಿದೆ.

ಈಶ್ವರ ಸಣಕಲ್ಲರವರ ಸತಿಯಲ್ತು-ದೇವತೆಯು ಕವಿತೆಯಲ್ಲಿ ತನ್ನ ಹೆಂಡತಿಯ ಅಗಲಿಕೆಯಲ್ಲಿನ ನೋವನ್ನು, ಹೆಂಡತಿಗೆ ಅವರು ನೀಡಿದ ಸ್ಥಾನವನ್ನು, ಈ ಸಮಾಜದಲ್ಲಿ ಹೆಣ್ಣಿನ ಬಗೆಗಿದ್ದ ಕೇವಲತೆಯನ್ನು ತಿಳಿಸಿದ್ದಾರೆ.

**ಹೆಣ್ಣೊಂದು ಸಾಯಲದಕೇಕಿನಿಸು ಹಲುಬುವುದು?**
**ಓರ್ವ ಹೆಂಡತಿ ಹೋಗೆ ಮತ್ತೋರ್ವಳನು ತಹುದು!**
**ಬಿಡು ದುಃಖ! ಇದು ಯಾವ ಘನ**

ಈ ಸಾಲುಗಳಲ್ಲಿ ಸಾಂಪ್ರದಾಯಿಕ ಸಮಾಜದಲ್ಲಿ ಹೆಣ್ಣಿಗಿರುವ ಕೇವಲತೆ ಮತ್ತು ಹೆಣ್ಣಿನ ಜೀವಕ್ಕೆ ಪ್ರಾತಿನಿಧ್ಯವಿಲ್ಲದಿರುವಿಕೆಯನ್ನು ತಿಳಿಸುತ್ತಾ ಅದೇ ಕವಿತೆಯಲ್ಲಿ ಮುಂದುವರೆದು ಗಂಡಿಗೆ ಹೆಣ್ಣಿನ ಅವಶ್ಯಕತೆ ಎಷ್ಟು ಮುಖ್ಯ ಎಂಬುದನ್ನು ಅರಿವಾಗಿಸಿದ್ದಾರೆ. ಹೆಣ್ಣು ಗಂಡು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಜೀವಸಂಕುಲ ಮುಂದುವರೆಯಲು ಕೇವಲ ಪುರುಷನಿಂದ ಮಾತ್ರ ಸಾಧ್ಯವಿಲ್ಲ ಎಂಬ ಅರಿವು ಸಮಾಜಕ್ಕೆ ಅಗತ್ಯವಾಗಿ ಬೇಕಾಗಿದೆ.

**ಹೆಣ್ಣು ಗಂಡೆಂಬೆರಡು**
**ಗೊಂಬೆಗಳ ಆಟದೊಳು**
**ಎನ್ನೊಡಲು ಕುದಿಯುತಿದೆ**
**ಹೆಣ್ಣಾಟವ ಕಂಡು**

ಮಹಿಳಾ ಲೇಖಕಿಯಾದ ಬೆಳಗೇರೆ ಜಾನಕಮ್ಮ ಅವರ ಹೆಣ್ಣಾಟ ಕವಿತೆಯಲ್ಲಿ ಬದುಕೆಂಬ ಆಟದಲ್ಲಿ ಹೆಣ್ಣು ಮತ್ತು ಗಂಡಿನ ಪ್ರಾತಿನಿಧ್ಯಗಳನ್ನು ಅರಿತು ಹೆಣ್ಣಿನ ಅಂತರಂಗದ ಕುದಿತವನ್ನು ತೆರೆದಿಡುವ ಹಾಗೂ ನವೀನತೆಯಿಲ್ಲದ ಹೆಣ್ಣಿನ ಬದುಕಿನ ಬಗೆಗೆ ತಿಳಿಸಲು ಪ್ರಯತ್ನಿಸಿದ್ದಾರೆ. ಹೆಣ್ಣನ್ನ ಪುರುಷ ಪರಂಪರೆ ಹೇಗೆ ಎರಡನೆಯ ದರ್ಜೆಯಲ್ಲಿ ಬಳಸಿಕೊಳ್ಳುತಿದೆ ಇದರಿಂದ ಆಕೆಯ ಮೇಲಾಗಿರುವ ಪ್ರತಿಕೂಲ ಪರಿಣಾಮಗಳನ್ನು ಕುರಿತ ವಿವೇಚನೆಯಿಂದ ಆಕ್ರೋಶವನ್ನು ಹೊರಹಾಕಿದ್ದಾರೆ.

**ನನ್ನ ನೋಡುತ ಎಲ್ಲರೂ ಮನದಿ ದುಃಖಿಪರು**
**ಕಣ್ಣೀರು ಸುರಿಸುತ್ತ ನಿಟ್ಟುಸಿರ ಸೂಸುವರು**
**ಪತಿಯೇ? ಅವನಾರಮ್ಮ? ಯಾರವನು ನನಗರುಹ**
**ಅವ ಸತ್ತರೇಕಿಂತು ನನ್ನ ಪೀಡಿಸುತಿರುವೆ**
**ಅಯ್ಯೋ! ಬಳೆ ಕಳೆಚುವರು ಅಮ್ಮ ನೀ ನೋಡೆ**
**ಕಿವಿಯೋಲೆ ಬಿಚ್ಚುವರು ಬೇಡೆಂದು ಹೇಳೆ**
**ಸತ್ತವನಿಕೇಕಮ್ಮ ಬಳೆಗಳೀ ಒಡವೆಗಳು?**

**ಧರಿಸಿರಲು ನಾನವನು ಹೊಟ್ಟೆಯುರಿ ಅವಗೇನು**
**ಎಲ್ಲವೂ ನನಗೆಂದು ಅಂದೆ ನೀನೆನಗಿತ್ತೆ**

ಜಯಮ್ಮ ಬಿ.ವಿ. ಅವರ ಬಾಲೆಯ ಗೋಳು ಕವಿತೆಯಲ್ಲಿ ಗಂಡ ಎಂಬ ಸಂಬಂಧದ ಅರಿವಿಲ್ಲದ ಆಟ ಕುಣಿತದಲ್ಲೇ ಮಗ್ನವಾಗಿರುವ ಪುಟ್ಟ ಹುಡುಗಿಗೆ ದರ್ಶನವಾಗುತ್ತಿರುವ ಕರಾಳ ಸಂಪ್ರದಾಯದ ಮೂಢತೆಯ ಹಿನ್ನೆಲೆಯಲ್ಲಿ ಬಾಲ ವಿಧವೆಯ ಗೋಳನ್ನು ತಿಳಿಸಿದ್ದಾರೆ. ತನ್ನನ್ನ ಕಂಡು ಮರುಗುತಿರುವ ಇತರರನ್ನು ಕಂಡು ಸೋಜಿಗ ಪಡುವ ಮಗು, ತನ್ನದಾದ ಬಳೆ, ಓಲೆ, ಮುಡಿದಿರುವ ಹೂ ಎಲ್ಲವನ್ನು ತನ್ನಿಂದ ಕಿತ್ತುಕೊಳ್ಳುತ್ತಿರುವುದಕ್ಕೆ ನೊಂದುಕೊಳ್ಳುತ್ತಿರು ಮಗು ಪ್ರತಿಯೊಂದನ್ನು ತನ್ನಿಂದ ಕಿತ್ತುಕೊಳ್ಳದಂತೆ ತನ್ನ ತಾಯಿಯನ್ನು ಗೊಗರೆದು ಇದನ್ನೆಲ್ಲ ತಪ್ಪಿಸುವಂತೆ ಬೇಡುವಳು ಆದರೆ ತಾಯಿ ತನ್ನ ಕಂದನ ಅಳಲನ್ನು ಆಲಿಸದೆ ಸಂಪ್ರದಾಯದ ನಿಯಮಗಳನ್ನೆ ಮುಂದುವರೆಸುವುದು ವಿಪರ್ಯಾಸವಾಗಿದೆ.

**ಹೊರಡು ಬೇಗ ಎಂದು ಮುದುಡಿ ಬಿದ್ದ ಮನವ ದೂಡಿತು**
**ಬೆಚ್ಚಿ ಎದ್ದು ಕೂಸಿನಪ್ಪಿ ಬಿಗಿದು ಕಣ್ಣನೀರ ಮಿಡಿದು**
**ಒಡನೆ ಮುತ್ತನೊಂದನಿತ್ತು ಬಿದ್ದು ಮಡಕೆಯೆತ್ತಿ ಹಿಡಿದು**
**ಗುಡ್ಡದಷ್ಟು ಕಷ್ಟಬರಲಿ ಕಂದ ನಿನ್ನ ಬಾಳ ಬೆಳಕು**
**ನನ್ನ ಹೃದಯ ತುಂಬಿ ಇರಲಿ ಎಂದು ನಗುತ ನಡೆದಳು**
**ತನ್ನೆಲ್ಲಾನೋವು ಕಷ್ಟಗಳನ್ನು ಮಗುವಿಗಾಗಿ ಸಹಿಸುವಳು ತಾಯಿ**

ಕಾವೇರಮ್ಮ ಎಲ್.ವಿ. ಅವರ ಹೊಲೆಯರ ಹೆಣ್ಣು ಕವಿತೆಯಲ್ಲಿ ಕಣ್ಮನ ಸೆಳೆವ ಸುಂದರವಾದ ಪ್ರಕೃತಿಯಲ್ಲಿ ಕೆಳವರ್ಗದ ಹೆಣ್ಣೊಬ್ಬಳ ಬಡತನದ ಬೇಗೆಯಲ್ಲಿ ಉಡಲು ಬಟ್ಟೆಯಿಲ್ಲದೆ, ಉಣ್ಣಲು ಅನ್ನವಿಲ್ಲದ ಸ್ಥಿತಿಯಲ್ಲಿ ಮನಸ್ಸು ಸಾವಿನತ್ತ ಹೊರಳಿದರೂ ತನ್ನ ಮಗುವನ್ನು ನೋಡಿ ತನ್ನೆಲ್ಲ ದುಃಖ ಕಷ್ಟಗಳನ್ನು ಮರೆತು ಬದುಕುವ ಛಲ ಹೊಂದುವಳು ತಾಯಿ ತನ್ನ ಹಸುಗೂಸಿಗಾಗಿ ಎಂತಹ ಕಷ್ಟವನ್ನು ಎದುರಿಸಬಲ್ಲಳು ಎಂಬುದರ ಆಶಯವನ್ನೊಳಗೊಂಡಿದೆ ಕವಿತೆ.

**ಹೂಜಿಯೊಳಗಿರಿಸಿರುವ ರೋಜ ಬಾಡುತ ಬಂತು**
**ಬೆಳ್ಳಿಬಟ್ಟಲು ಹಾಲು ಕೆನೆಗಟ್ಟಿತು**
**ಬಾರನಾದರೂ ರಮಣನೆಂತುಳಿವುದೀಹಣ?**
**ಕಾಮಿನಿಯ ಕಾತರತೆ ಕೊನೆಮುಟ್ಟಿತು**

ಎಸ್.ವಿ. ಪರಮೇಶ್ವರ ಭಟ್ಟ ಅವರ ರಾಗಿಣಿ ಕವಿತೆಯು ಸುಂದರವಾಗಿ ಅಲಂಕರಿಸಿಕೊಂಡು ಇರುಳಲ್ಲಿ ಇನಿಯನಿಗಾಗಿ ಕಾತುರತೆಯಿಂದ ಕಾಯುತಿರುವ ಹೆಣ್ಣೊಬ್ಬಳ ಚಿತ್ರಣವಿದೆ. ಸಂಜೆಯ ಇಂಪು ಅವಳ ಉದ್ವೇಗವನ್ನು ಹೆಚ್ಚಿಸಿ ಅವಳ ಕಾತುರತೆ, ಆತುರತೆಯೆಲ್ಲವೂ ಇನಿಯ ಬಾರದಿದ್ದಾಗ ಕೊನೆ ಮುಟ್ಟಿ ಪ್ರೇಮವು ಶೂನ್ಯವೆಂಬ ವಾಸ್ತವತೆಯನ್ನು ಅರ್ಥಮಾಡಿಸುತ್ತದೆ.

**ಉರಿ ಹತ್ತಿತು ಹೊಗೆ ಸುತ್ತಿತು**

**ಹರೆಯದ ಬೇರಿಗೆ ಬೇರಿಗೆ!**

**ಆಯಿತಲಾ**

**ಹೋಯಿತಲಾ**

**ಇವಳೊಂದಾಯುಷ್ಯ!**

**ಇವಳೊಂದು ಭವಿಷ್ಯ!**

ಕಡೆಂಗೋಡ್ಲು ಶಂಕರಭಟ್ಟರ ಸತಿ ಕವಿತೆಯಲ್ಲಿ ಹರೆಯದ ವಯಸ್ಸಲ್ಲಿಯೆ ಬಂದೊದಗಿದ ವೈಧವ್ಯದ ಸ್ಥಿತಿಯನ್ನು ಕಂಡು ಮರುಗುತಾ. ವಿಧವೆಗೆ ಧರ್ಮಾತ್ಮರು ಸೃಷ್ಟಿಸಿರುವ ನೀತಿಗಳಲ್ಲಿ ಅವಳನ್ನು ಪತಿಯೊಂದಿಗೆ ಚಿತೆಯೇರಿಸುವಂತಹ ಕಟ್ಟುಪಾಡುಗಳಿಗೆ ಮರುಗುತಾ ಇಂತಹ ನಿಯಮಗಳಿಂದ ಅವಳ ಬದುಕನ್ನು ಮೇಲೆತ್ತಿ ನಗುವಿನ ಬಾಳು ಆ ಹೆಣ್ಣಿಗೆ ಸಿಗಲೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ ಹೊರತು ಅಂತಹ ನಿಯಮಗಳನ್ನು ಪ್ರತಿರೋಧಿಸಿ ವಿಧವಾ ವಿವಾಹಕ್ಕೆ ಮುಂದಾಗಬೇಕೆಂಬ ಆಶಯವಾಗಲಿ ಸ್ತ್ರೀಸಮಾನತೆಯ ಆಶಯವಾಗಲಿ ವ್ಯಕ್ತವಾಗುವುದಿಲ್ಲ.

**ಬೆಡಗಿನ ವಯ್ಯಾರಿ,**

**ಮೋಹ ಬೀರುವ ರೂಪಜೀವಿ,**

**ಚರ್ಮಸುಲಿಯುವ ಮೋಸಗಾತಿ**

**ಅತಿ.**

**ನಾಚಿ ಮುಖತಗ್ಗಿಸುವ ಭೀರು,**

**ಹಾವಭಾವ ಕಂಡರಿಯದ ಮುಗುದೆ,**

**ಮನೆಯ ಹೆಂಡತಿ**

**ಮಿತಿ.**

ಎಸ್ ವಿ ರಂಗಣ್ಣ ಅವರು ರಂಗಬಿನ್ನಪ ಕವಿತೆಯಲ್ಲಿ ಮನೆಯ ಹೆಂಡತಿಗೂ ಊರ ಹೆಂಡತಿಗೂ ಅಂದರೆ ವೇಶ್ಯೆಗೂ ಅಥವಾ ಪುರುಷ ಕಟ್ಟುಪಾಡುಗಳನ್ನು ಮೀರಿದ ಹೆಣ್ಣಿಗೋ ಎಂಬುವುದರ ಗೊಂದಲದಲ್ಲಿ ಇರುವ ಅತಿ ಮಿತಿಗಳನ್ನು ಪ್ರಸ್ತಾಪಿಸಿದ್ದಾರೆ. ಮನೆಯೊಳಗಿನ ಹೆಂಡತಿ ಮಿತಿ ಅಂದರೆ ಅವಳ ಹಾವ, ಭಾವ, ನಡೆ, ನುಡಿ ವೇಷಭೂಷಣಗಳೆಲ್ಲವೂ ಮಿತವಾಗಿಯೇ ಇರಬೇಕು ಹಾಗೆಯೇ ಇರುತ್ತವೆ. ಆದರೆ ಅತಿಯ ವಿಚಾರದಲ್ಲಿ ಅವಳ ವರ್ತನೆ ಮಿತಿಯ ವರ್ತನೆಗಳಿಗೆ ತದ್ವಿರುದ್ಧವಾಗಿರುತ್ತದೆ. ಆದರೆ ಗಂಡಸರ ಮನಸ್ಸು ಮಿತಿಯ ಕಡೆಗೆ ವಾಲುವುದಕ್ಕಿಂತ ಅತಿಯ ಕಡೆಗೆ ವಾಲುವುದು ಹೆಚ್ಚು ಎಂಬುದನ್ನು ಸೂಚಿಸಿದರೆ ಇವರು ಅತಿಗಿಂತ ಮಿತಿಯನ್ನೇ ಪುರಸ್ಕರಿಸಿದ್ದಾರೆ. ಆದರೆ ಇಲ್ಲಿ ಅತಿ–ಮಿತಿಗಳೆಲ್ಲದರ ಸೃಷ್ಟಿಕರ್ತ ಪುರುಷನೆ ಪುರುಷನಿಗಾಗಿಯೇ ಎಂಬುದರ ಸುಳಿವಿಲ್ಲ.

ಮಾಸ್ತಿಯವರ ಚಿಕ್ಕಮಲ್ಲಮ್ಮ ಕವಿತೆಯಲ್ಲಿ ಅತ್ಯಾಚಾರಕ್ಕೊಳಗಾದ ಹೆಣ್ಣೊಬ್ಬಳನ್ನು ಗಂಡ, ಮಾವ, ಮೈದುನ ತಂದೆ ತಾಯಿ ಎಲ್ಲರೂ ಆಕೆಯನ್ನು ಸಮಾಧಾನ ಪಡಿಸಲು ಯತ್ನಿಸಿದರು ಆಕೆ ಮಾತ್ರ ತಾನು ಎಂಜಲಾದೆ ಎಂಬ

ಮನಸ್ಥಿತಿಯಿಂದ ಎಂಜಲಾದ ಈ ಮೈಯ್ಯನು ನಾನು ಸಂಜೆಯ ಮೊದಲೇ ಸುಡಬೇಕೆಂದು ತೀರ್ಮಾನಿಸಿ ಸಾಮಾಜಿಕವಾಗಿ ಅಗ್ನಿಪ್ರವೇಶಿಸುವಳು ಕವಿತೆಯ ಕೊನೆಯಲ್ಲಿ ಮಾಸ್ತಿಯವರು

**ಕನ್ನಡ ನಾಡಿನ ಮಕ್ಕಳು ಎಂದಿಗು**
**ಮನ್ನಣೆ ಎಂದರೆ ಇಂತೇ ನಡೆಯಲಿ**

ಎಂಬುದು ಮಾಸ್ತಿಯವರು ಹೆಣ್ಣಿನ ಬಗೆಗೆ ಒಳಗೊಂಡಿದ್ದ ಅಪವಿತ್ರತೆಯ ಭಾವನೆಯನ್ನೇ ತೋರ್ಪಡಿಸಿ ಅನುಚಿತವಾದದ್ದನ್ನು ಉಚಿತವೆಂಬಂತೆ ಬಿಂಬಿಸಿರುವುದನ್ನು ಕಾಣಬಹುದು. ಕೆ.ಎಸ್ ನರಸಿಂಹಸ್ವಾಮಿ ಅವರ ನಲವತ್ತರ ಚೆಲುವೆ ಕವಿತೆಯು ಸಿನೆಮಾತಾರೆಯನ್ನು ಅನುಕರಿಸುವ ಚಂಚಲ ಮನಸ್ಥಿತಿಯ ನಗರದ ಜೀವನದ ಬದುಕಿಗೆ ಹಂಬಲಿಸುವ ಲೋಕದ ಬಗೆ ಬಗೆಯ ಬಯಕೆಗಳನ್ನು ಸುಂದರ ಕನಸುಳ್ಳ ಹೆಣ್ಣೊಬ್ಬಳ ಚಿತ್ರಣವಿದೆ. ತಿರಿವ ಮುದುಕಿ ಕವಿತೆಯಲ್ಲಿ ಡಿ.ಎಸ್ ಕರ್ಕಿ ಅವರು ತನ್ನವರೆಲ್ಲರನ್ನು ಕಳೆದುಕೊಂಡ ಮುದುಕಿಯು ತನ್ನವರಾರು ಇಲ್ಲದ ತನಗೇನು ಉಳಿಯದ ಬೀದಿಯಲ್ಲಿ ಬದುಕುವ ಮುದುಕಿಯ ಮನೋವೇದನೆಯನ್ನು ತಿಳಿಸಲಾಗಿದೆ. ನೇತ್ರ ನಟಿಯರು ಕವಿತೆಯಲ್ಲಿ ತೀ.ನಂ.ಶ್ರೀಕಂಠಯ್ಯನವರು ನಟನೆಯ ಹಾವಭಾವ ಬಿಂಕಗಳ ಜೊತೆಗೆ ಪಳಗೆ ಪಳಗಿರುವ ನಟಿಯರ ಕುರಿತು ತಿಳಿಸಿದ್ದಾರೆ.

ಹೀಗೆ ನವೋದಯ ಕಾಲಘಟ್ಟದ ಕವಿಗಳಲ್ಲಿ ಹೆಣ್ಣನ್ನು ಸೌಂದರ್ಯ, ಆದರ್ಶಮಯಿಯಾಗಿ, ತ್ಯಾಗಮಯಿಯಾಗಿ, ಗೃಹಸ್ಥೆಯಾಗಿ, ಮನದನ್ನೆಯಾಗಿ, ಸಹಧರ್ಮಿಣಿಯಾಗಿ ಪುರುಷನ ಏಳಿಗೆಗೆ ಮಾತ್ರ ಆಕೆಯ ಪಾತ್ರವಿರಬೇಕೆಂಬುದನ್ನು ಈ ಕವಿತೆಗಳಲ್ಲಿರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು ಹಾಗೂ ಮಹಿಳೆಯ ಕವಿತೆಗಳ ಸಂಖ್ಯೆಯಲ್ಲಿ ಸೀಮಿತತೆಯಿದ್ದರೂ ವಿಷಯದಲ್ಲಿ ಸಮಾಜ ಹೆಣ್ಣಿಗೊಡ್ಡಿರುವ ಸಂಪ್ರದಾಯಗಳ ಪರಿಧಿಯನ್ನು ಸಂವೇದನೆ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

## ಪರಾಮರ್ಶನ ಗ್ರಂಥಗಳು:

1. ಷರೀಫಾ ಕೆ. (ಸಂ.), (2011), ಹೊಸ ಶತಮಾನದ ಕಾವ್ಯ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
2. ವೆಂಕಟೇಶಮೂರ್ತಿ ಎಚ್.ಎಸ್. (ಸಂ.), (2022), ಶತಮಾನದ ಕಾವ್ಯ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
3. ಚಂದ್ರಿಕಾ ಪಿ. (ಸಂ.), (2020), ಮಹಿಳಾ ಸಾಹಿತ್ಯ ಸಂಪುಟ ಕಾವ್ಯ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
4. ಸಂಧ್ಯಾರೆಡ್ಡಿ ಕೆ.ಆರ್. (ಸಂ.), (2019), ಕಾವ್ಯ, ಬೆಂಗಳೂರು: ಕುವೆಂಪು ಭಾಷಾಭಾರತಿ ಪ್ರಾಧಿಕಾರ.
5. ಅಶೋಕ ಟಿ.ಪಿ., (2016), ಕಾವ್ಯಪ್ರೀತಿ, ಸಾಗರ: ಅಕ್ಷರ ಪ್ರಕಾಶನ.